RegdNo B G 155 Sm (1182) 23—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅವಧಾನಿ ವೀರಭದ್ರಪ್ಪನವರ್ ಎಂ ವಿ ಕುಬ್ಬಣ್ಣಾಚಾರ್ಯರು ಸಂಪಾದಕರು — ಧರ್ಮಪ್ರಚಾರವಿರತ ಎಂ ಎಸ್ ಕೃಷ್ಣರಾವ್ 2

ಪತ್ರಿಕಾ ಪ್ರತಿನಿಧಿಗಳ ಕಡೆಗೆ ಚಿತ್ತವಿರಲಿ

ದಿನವಿಡೀ ವಾಣಿಜ್ಯ ವ್ಯವಹಾರದಲ್ಲೇ ಇದ್ದರೂ, ಪತ್ರಿಕಾ ಪ್ರತಿನಿಧಿಗಳ ಕಡೆಗೂ ಲಕ್ಷ್ಯವನ್ನಿಟ್ಟು ಮನುಷ್ಯನು ಸದಾ ಧಾರ್ಮಿಕ ಪ್ರವೃತ್ತಿಯವನಾಗಿರುವುದು ಅವಶ್ಯಕ ; ಧಾರ್ಮಿಕ ಜೀವನ ಮಾತ್ರ ಮಾನವನಿಗೆ ಅಂತಿಯನ್ನೀಯಬಲ್ಲುದು— ಇನ್ಕಮ್‌ಟ್ಯಾಕ್ಸ್ ಆಫೀಸರೆಂಬ ಮಾಣಿಕಚಂದ್ರರು ಮಂಗಳೂರು ಚೇಂಬರ್ ಆಫ್ ಕಾಮರ್ಸಿನಲ್ಲಿ ಅವರಿಗಿತ್ತ ಔತ್ಯಂದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು

ಂ ಂ ಂ

'ಬ್ರಿಟಿಷ್' ಪಾರ್ಲಿಮೆಂಟು

ಬ್ರಿಟನ್ನಿನ ಪಾರ್ಲಿಮೆಂಟಿಗೆ ಈ ತಾ|| 22 ರಂದು ಏಳು ನೂರು ವರ್ಷಗಳು ತುಂಬಿದವು ; ಜಗತ್ತಿನ ಪಾರ್ಲಿಮೆಂಟುಗಳಲ್ಲಿ ಅತ್ಯಂತ ಹಳೆಯದೂ, ಪ್ರಜಾ ಪ್ರಭುತ್ವ ತತ್ವಗಳ ತಳಹದಿ ಹಾಕಿಕೊಟ್ಟು ಇತರ ಪಾರ್ಲಿಮೆಂಟುಗಳಿಗೆ ಮಾರ್ಗದರ್ಶಕವಾಗಿದ್ದುದೂ, ಈ ಪಾರ್ಲಿಮೆಂಟಿನ ಹಿರಿಮೆಯಾಗಿದೆ : ಅದರಿಂದಲೇ ಈ ಪಾರ್ಲಿಮೆಂಟನ್ನು 'ಪಾರ್ಲಿಮೆಂಟುಗಳ ಮಾತೆ' ಎನ್ನುವರು — ಈ ತಿಂಗಳಲ್ಲೇ ಬ್ರಿಟನ್ನಿನ ಕಾರ್ಟಾ'ದ 750 ನೇ ಜಯಂತಿಯನ್ನು ತಕ್ಕ ರೀತಿಯಲ್ಲಿ ಆಚರಿಸಿದೆವು ; ಅನ್ಯಾಯವಾದವರು ನ್ಯಾಯಾಲಯಗಳಲ್ಲಿ ಅಪೀಲು ಮಾಡಬಹುದೆಂಬ ಅಂಶವೂ ಮಾಗ್ನಾ ಕಾರ್ಟದಲ್ಲಿತ್ತು : ನಾಡಿದ ರಾಜನು ರೀತ್ಯಾ ಮಕ್ತ ಪ್ರಭುಗಳ ನ್ಯಾಯ ತೀರ್ಮಾನ ವಿನಃ ಯಾವ ಪ್ರಜೆಯನ್ನೂ ಬಂಧಿಸಬಾರದು, ನೋಯಿಸಬಾರದು, ಕೊಲ್ಲಬಾರದು .... ಎಂಬೀ ನಿಯಮವೂ ಮಾಗ್ನಾ ಕಾರ್ಟದಲ್ಲಿ ಸ್ಪಷ್ಟವಾಗಿತ್ತು — ಈಗ 750 ನೇ ವರ್ಷದಂದು ಆ ಚಾರ್ಟರಿನ 11 ಅಧ್ಯಾಯಗಳು ಮಾತ್ರ ಹಾಗೇ ಉಳಿದಿದೆ. ಉಳಿದವು ತೆಗೆಯಲ್ಪಟ್ಟವೆ, ಬದಲಾವಣೆಗಳಾಗಿವೆ : ರಾಜನೂ ಬದ್ಧ ಸಂಸತ್ತು ಎಂಬ ಮೂಲಾಂಶವು ಹಾಗೇ ಉಳಿಕೊಂಡಿದೆ — ಪ್ರಥಮ ಪಾರ್ಲಿಮೆಂಟು 1265 ರಲ್ಲಿ ಸೇರಿತ್ತಾದರೂ ಆ ಮೊದಲೇ 1240 ರಲ್ಲಿ ಪಾರ್ಲಿಮೆಂಟು ಶಬ್ದ ಪ್ರಯೋಗವಾಗಿತ್ತು ; ಅಂದಿನ ರಾಜ್ಯಮುಖ್ಯ ವಿಷಯಗಳ ಚರ್ಚೆಗೆ ಮತ್ತು ಸಮಾಲೋಚನೆಗೆ ತನ್ನ ಮಂತ್ರಿಗಳನ್ನೂ ಜಯಗೀರುದಾರರನ್ನೂ ಕೈಸ್ತಮತಾಧಿಪತಿಗಳನ್ನೂ ಕರೆಸುತ್ತಿದ್ದನು — 700 ವರ್ಷಗಳ ಹಿಂದೆ ಹೌಸ್ ಆಫ್ ಕಾಮನ್ಸ್ ನಿಂದ ಹುಟ್ಟಿದ ಬ್ರಿಟಿಷ್ ಪಾರ್ಲಿಮೆಂಟು, ಮುಂದೆ ಕೆಲ ಕಾಲಾಪಂತರ ಹೌಸ್ ಲಾರ್ಡ್ಸ್‌ನ್ನೂ ಹೊಂದಿತು.

ಂ ಂ ಂ

ಶತಾಯುಷಿ ನಿಧನ

ದೇಶಕಬ್ಬಿಣು ಕಾಫೀ ಹೋಟಲೊಂದರ ಮಾಲೀಕ ವಿಶಪ್ಪ ಬಂಗೇರರ ತಾಯಿ ಶ್ರೀಮತಿ ಅಪ್ಪು ಎಂಬ ವೃದ್ಧೆ ಕೆಲ ದಿನಗಳ ಹಿಂದೆ ತಮ್ಮ ಸ್ವಗೃಹದಲ್ಲಿ 115 ನೇ ಹಿರಿಯವಯಸ್ಸಿನಲ್ಲಿ ದೈವಾಧೀನರಾದರು ಮೃತ್ಯುವಶರಾಗುವ ತನಕವೂ ಅವರು ಹಟ್ಟುವಟಿಕೆಯುಳ್ಳವರಾಗಿಯೂ ಚಿಕ್ಕಸ್ವಾಸ್ಥ್ಯದಲ್ಲಿದ್ದರೆಂಬ ಶಬ್ದವಾಗಿ ತಿಳಿಯಲಾಗಿದೆ. (ಮಂ. ಪ್ರ)

ಂ ಂ

ಪರಿಷತ್ತಿ

ಮೈಸೂರು ಪೌರಸಭೆಯ ಈ ಮಾಹೆಯ ಸಾಧಾರಣ ಅಧಿವೇಶನವು ತಾ|| 30 ಬುಧವಾರ ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಬೆನ್ ಬೆಲಾರ ಬೆಂಬಲಿಗರ ನವಮೋಹಕ ದಸ್ತಗಿರಿ

★

ಚೀಣಾಕ್ಕೆ ಹೆಚ್ಚು ಅನುಕೂಲ

ಅಲ್ಜೀರ್ಸ್— ಸಮ್ಮೇಳನಕ್ಕೆ ಭಾರಿ ಡೆಲಿಗೇಷ್ಟಗೆ ಏರ್ಪಡಿಸಿದ್ದ 10 ಕೊಠಡಿಗಳನ್ನು ಸರಕಾರ ವಶಪಡಿಸಿಕೊಂಡಿದೆ. ಆದರೆ ಚೀನದ 500 ಮಂದಿಗೂ ಸಂಕಾದರ ನಿವಾಸ ಸಿಕ್ಕಿದೆ

★

ಸೈನಿಕರು ವಾಪಸ್ಸಾಗಿಲ್ಲ

ನವದೆಹಲಿ— 53620 ಅಡಿ ಎತ್ತರದಲ್ಲಿ ಕಾರ್ಗಿಲು ಹತ್ತಿರ ತ್ರಿಶೀನಗರ-ಲೇ ರಸ್ತೆಯಲ್ಲಿನ ಎರಡು ಪೋಸ್ಟುಗಳಿಂದ ಭಾರತದ ಉಸ್ತುವಾರಿ ಸೈನ್ಯವನ್ನು ವಾಪಸ್ಸು ಕರೆಸಲಾಯಿತು — ವಿಶ್ವಸಂಸ್ಥೆ ವೀಕ್ಷಕರು ಅಲ್ಲಿ ನೋಡಿಕೊಳ್ಳುವುದಾಗಿ ಭಾಂವಸೆ ಇತ್ತಿದ್ದಾರೆ.

ಸನ್ಯಾಸಿಗೆ ನಂಬಾರಿಯಾಗಲು ಬಯಕೆ

ಸಿಲೋನಿನಲ್ಲಿ 15 ವರ್ಷಗಳಿಂದ ವಾಸ್ತವ್ಯವಾಗಿರುವ ರೆವರೆಂಡ್ ಫಾದರ್ ನೇಯಲ್ ಕೂಸರು 28 ವರ್ಷದ ಸುಂದರಿ ಮಿಸ್ ಮದೇಳನನ್ನು ವಿವಾಹವಾಗಲು ಅಪೇಕ್ಷಿಸಿದ್ದಾರೆ ; ಅದಕ್ಕಾಗಿ ಪಾದ್ರಿ ಪದವಿಯಿಂದ ನಿವೃತ್ತಿಗೊಳಿಸಬೇಕೆಂದು ಪೋಪರನ್ನು ಪ್ರಾರ್ಥಿಸಿದ್ದಾರೆ

★

ಸ್ಥಳೀಯ ಪಂಚಾಂಗ

ದೈವಜ್ಞ ಶಿರೋಮಣಿ
ಅಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ದಾಜಕಾರ್ಯಾಧಕ್ಷ, ಜ್ಯೋತಿರ್ವಿದ್ಯಾಸ್ಥಪತಿ
ಸಂಪತ್ಕವಿ ಕೃಷ್ಣಜೋಯಿಸಂವರಿಂದ
24 ಗುರುವಾರ ದಶಮಿ ಅಶ್ವಿನಿ

ಅಲ್ಜೀರ್ಸ್— ಹೂಡೆದೂಡಲಾದ ಅಧ್ಯಕ್ಷ ಬೆ ಬೆಲ್ಲಾ ಬೆಂಬಲಿಗರು 400—500 ಮಂದಿ ದಸ್ತಗಿರಿ ಮಾಡಲ್ಪಟ್ಟರು — ಹೊಸ ನಾಯಕ ವರ್ಗ ಸರಕಾರದ ವಿರುದ್ಧ ಪ್ರಭಟನಾ ಪ್ರದರ್ಶನ ನಡೆಸಿದ ವಿದ್ಯಾರ್ಥಿಗಳ ಗುಂಪನ್ನು ಮಟ್ಟಾಹಾಕಲಾಯಿತು — ಹೊಡೆದಾಟದಲ್ಲಿ ಹತ್ತು ಮಂದಿ ಮಡಿದರು — ಸೈನ್ಯದ ಕಾರ್ಯಾಚರಣೆ ಇತ್ತು.

ಕೆಲಸಿ

ಸಿಕ್ಕರ ವಿಷಯದಲ್ಲಿ

ಲಂಡನ್— ತಮ್ಮ ಸರಕಾರಕ್ಕೆ ಸಿಕ್ಕರ ವಿಷಯದಲ್ಲಿ ಯಾವ ದುಃಖಪಶ್ಚಾತ್ತಾಪವೂ ಇಲ್ಲವೆಂದೂ, ಅವರ ಗುರುದ್ವಾರಗಳಿಗೆ ಒಳ್ಳೇ ರಕ್ಷಣೆ ನೀಡಲಾಗಿದೆಯೆಂದೂ ಪಾಕಿಸ್ತಾನ ವಿದೇಶಾಂಗ ಸಚಿವ ಭುತ್ತೋ ಹೇಳಿದರು — ಪಾಕಿಸ್ತಾನವು ಈಚೆಗೆ 50000 ಸಿಕ್ಕರಿಗೆ ತಮ್ಮ ಪವಿತ್ರ ಸ್ಥಳಗಳ ಭೇಟಿಗೆ ಅವಕಾಶ ಮಾಡಿಕೊಟ್ಟ ಕೆಲವು ಗಂಟೆಗಳಲ್ಲೇ ಅಪ್ಪಜೆ ಕೊಡಲಾಯಿತೆಂದೂ ಹೇಳಿದರು

ಈಡಿಯುವ ನೀರು

ನವದೆಹಲಿ— ಪಾಸನಿರೋಧಕ್ಕಿಂತಲೂ ದೇಶಾದ್ಯಂತ ಈಡಿಯುವ ನೀರು ಒದಗಿಸುವುದಕ್ಕೆ ಪ್ರಾಶಸ್ತ್ಯ ಕೊಡುವುದಾಗಿ ಪ್ಲಾನಿಂಗ್ ಉಪಾಧ್ಯಕ್ಷ ಅರೋರ ಸ್ಪಷ್ಟೀಕರಣ ಹೇಳಿದರು

ಸಾಲಗಾ

ನವದೆಹಲಿ— ಭಾರತ ಸರಕಾರವು ನೆಹರೂ ಬಾರು, ದೆಹಲಿ ಅಲ್ಯೂಮಿನಿಯಂಗಳು ವಿದ್ಯುಚ್ಛಕ್ತಿ, ಕೇಬಲು ಕೈಗಾರಿಕೆಗಳಿಗಾಗಿ ವಿಶ್ವಬ್ಯಾಂಕಿನಿಂದ 100 ಮಿಲಿಯ ಡಾಲರು ಸಾಲ ಕೇಳಿದೆ.

ಭಾಷಾ ಸಮಸ್ಯೆಗೊಂದು ' ರಾಮಬಾಣ '

—o—

(ಮುಂದುವರಿದುದು)

ಲೇಖನದ ಮೊದಲೇ ಹೇಳಿದಂತೆ ನಮ್ಮೆದಾದ ಮತ್ತು ಸ್ವಾಭಿಮಾನದ ಪಂಕೀಯ ದಾಸ್ಯವನ್ನು ಕಿತ್ತೆಸೆಯುವ ನಮ್ಮ ಪುನ ಸ್ಥಾಪನೆಯಾಂದ ಪ್ರಯೋಜನ ಫಲಿಸಲಿಲ್ಲವೆಂದೇ ತಿಳಿಯಬಾರದು. ಆಂಗಿಕ ಭಾಷೆಯು ಉಚ್ಚಾಟನೆ ಸಾಧ್ಯವಿಲ್ಲ ಎಂದಾದ ಮೇಲೆ ಹಿಂದಿಯನ್ನೇ ಏಕೆ ರಾಷ್ಟ್ರಭಾಷೆಯಾಗಿ ಮಾಡಬೇಕು ? ಹಿಂದಿಗೆ ಒದಲಾಗಿ ಸಂಸ್ಕೃತವನ್ನೇ ಏಕೆ ರಾಷ್ಟ್ರಭಾಷೆಯನ್ನಾಗಿ ಮಾಡಬಾರದು ?

ಹಿಂದಿ ರಾಷ್ಟ್ರಭಾಷೆ ' ಎನ್ನುವುದರಿಂದಲೇ ಈ ನಾನಾ ಸಮಸ್ಯೆ ಉದ್ಭವಿಸಲಾಗಿದೆ. ಅದಕ್ಕೆ ಕಾರಣವಾಗಿದೆ.

ಆದ್ದರಿಂದ ಭಾಷಾ ಸಮಸ್ಯೆಗೆ ' ರಾಮಬಾಣ ' ದಂತಿರುವ ಒಂದೇ ಒಂದು ಪರಿಹಾರವೆಂದರೆ ಸಂಸ್ಕೃತವನ್ನು ರಾಷ್ಟ್ರಭಾಷೆಯನ್ನಾಗಿ ಘೋಷಿಸಿ, ಜಗಳ ಕದನ, ದ್ವೇಷದ್ರೋಹಗಳನ್ನು ದಮನಮಾಡಿ ಎಡೆಮೆಟ್ಟಿ ನಿಲ್ಲಲು ಏಕೈಕ ಮಾರ್ಗ !

ಸಂಸ್ಕೃತ ರಾಷ್ಟ್ರಭಾಷೆಯಾದಲ್ಲಿ ಅಖಂಡ ಭಾರತ ನಿರ್ಮಾಣ, ಹಿಂದೂ ರಾಷ್ಟ್ರಘೋಷಣೆ, ವಸೇತಿ ಹಸುಗಾಲಯ ದರ್ಶಂತ, ಧರ್ಮ ಪ್ರಚಾರ, ಸಾಂಸ್ಕೃತಿಕ, ಆಡಳಿತ, ಸಾಮಾಜಿಕ, ಆರ್ಥಿಕ, ಶಿಕ್ಷಣ, ಕರ್ಮ, ನ್ಯಾಯ, ನೀತಿ ಸ್ಥಾಪನೆ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ, ಸುಸ್ಥವಾಗಿರುವ ಭಾರತೀ ಸಂಸ್ಕೃತಿಯನ್ನು ಜಾಗತ್ತಿಗೇ ಪರಿಚಯಿಸಿ, ನಿತ್ಯವಂದ್ಯವಾದ, ವಿಶ್ವಮಾನ್ಯವಾದ, ಜಗತ್ತಿಗೇ ಅಧ್ಯಾತ್ಮಕದ ಹೆಣ್ಣೆಲೆ ಹಾಕಿಕೊಟ್ಟು, ಜಗತ್ತಿನ ಅಂಧಕಾರವನ್ನು ತೊಲಗಿಸಿ, ಹೊಂಬೆಳಗಿನ ಹಿಂದೂಧರ್ಮವನ್ನು ಪ್ರತಿಷ್ಠಾಪಿಸಬಹುದು ; ಕಾಯಿ ಭಾರತಮಾತೆಯನ್ನು ವಿಶ್ವಕ್ಕೇ ಅಜಂತ್ಯವಾಗಿ ಮಾಡಬಹುದು.

ವಂದೇಮಾತರಂ — ಭಾರತ ಮಾತಾಕೀ ಜೈ.

(ಅಧಿಕಾರಗಳಿಂದ

[ಲೇಖಕ— ಹೊಂ. ಸೆ. ನಾರಾಯಣಶಾಸ್ತ್ರಿ, ಕಾರ್ಯದರ್ಶಿ, ಹೊಂಗನೂರು ಶಂಖ ಶಾಸ್ತ್ರಧರ್ಮ ಪ್ರಚಾರ ಸಭಾ] (ಈ ಲೇಖನಕ್ಕೆ ಸಹಾಯವಾದ ಕೃತಿಗಳು ಮತ್ತು ಲೇಖಕರಿಗೆ ಅನಂತ ಪ್ರಣಾಮಗಳು)

ಅನಿವಾರ್ಯ ಕಾರಣ ನಾಳೆ ಪತ್ರಿಕೆ ಇಲ್ಲ



Help The GORAKSHANA

★

.... ಗೋರಕ್ಷಣೆಗೆ ಬೆಂಬಲ ನೀಡಿ ....

ಪಳಿಕ— ಗೋರಕ್ಷಣಾ ಅಭಿಯಾನ ಪಾಪಮಾರಿಯಲ್ಲಿರಂ ಪ್ರಸ್ತಕಲ್ಲು ।

ವುಡ್‌ಲಾಂಡ್ ನಲ್ಮೆಯ 5 ನೇ ವಾರ

ಶಿ ನ

ಪ್ರೇಕ್ಷಕರಿಂದ ಪತಂಸೆ ಪಡೆಯುತ್ತಾ ವೈಭವವಾಗಿ ನಡೆಯುತ್ತಿದೆ

ಸಂದರ ದೃಶ್ಯಕಳು, ಸಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಚಿತ್ರ

ಜಾನವರ್ (ಹಿಂದಿ) Janwar

ತಾರೆಯರು— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವಿರಾಜ್, ರಾಜೇಂದ್ರನಾಥ್

ಅಪೆರ— 25—6—65 ರಿಂದ

.... ಮಾಡರ್ನ್ ಥಿಯೇಟರ್ಸ್‌ನ 100 ನೇ ಅಪೂರ್ವ ಕಮಿಳ ಚಿತ್ರ ....

ವಲವನಕು ವಲವ

ನಟವರ್ಗ— ಜಮಿನಿ ಗಣೇಶನ್, ಸಾವಿತ್ರಿ, ಅಶೋಕನ್, ತಂಗವೇಲು

ಮನೋರಮ, ಮುತ್ತುಲಕ್ಷ್ಮಿ

ಶಕ್ತಿ

ಸುಧಾ

ಉತ್ತಮ ಟಾನಿಕ್

SHAKTI

SUDHA

A Superb Tonin

Ed ted. printed and published by Dharma prachara pirata

M s Kr'shna Rao, at the Satyavadi Press

Chamarajapuram, M,sore 4